ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೪ನೇ ಏಪ್ರಿಲ್ ೧೯೯೦, ಚೈತ್ರ ೧೪, ೧೯೧೨ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೧೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.]

ಸಚಿವರ ಗೈರು ಹಾಜರಿ ಬಗ್ಗೆ ಪ್ರಸ್ತಾಪ

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಯಾರೂ ಇಲ್ಲದೇ ಇರುವಾಗ ಸದನ ನಡೆಸುವುದು ಸರಿಯಲ್ಲ. ಆದ್ದರಿಂದ ಸ್ವಲ್ಪ ಹೊತ್ತು ಸದನವನ್ನು ಮುಂದಕ್ಕೆ ಹಾಕಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಇದು ಸದನಕ್ಕೆ ಅವಮಾನ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಅವಮಾನ ಸ್ವಾಮಿ ಇದು. ಈ ರೀತಿ ಕಾರ್ಯಕ್ರಮ ನಡೆಸುವುದು ಗೌರವದ ಸಂಗತಿಯಲ್ಲ.

ಶ್ರೀ ಎಂ. ಪಿ. ವೆಂಕಟೇಶ್.— ೯ ಘಂಟೆಗೆ ಸದನ ಸೇರುತ್ತದೆಂದು ಮಂತ್ರಿಗಳಿಗೆ ಗೊತ್ತಿಲ್ಲವೇ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಸರ್ಕಾರಕ್ಕೆ ಈ ಪರಿಸ್ಥಿತಿ ಬರಬಾರದಾಗಿತ್ತು. ಮಾನ್ಯ ಅಧ್ಯಕ್ಷರೆ ಕಮ್ಮ ಗಮನಕ್ಕೆ...

ಅಧ್ಯಕ್ಷರು.— ಒಬ್ಬೊಬ್ಬರಾಗಿ ಹೇಳಲಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಬಜೆಟ್ ಮೇಲೆ ಚರ್ಚೆ ಆಗತಕ್ಕ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಇರತಕ್ಕದ್ದು ವಾಡಿಕೆ. ಆದರೆ ಇಲ್ಲಿ ಯಾರೂ ಇಲ್ಲ.

ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಆಗತಕ್ಕ ಸಂದರ್ಭದಲ್ಲಿ ನಿನ್ನೆ ಒಬ್ಬ ಮಂತ್ರಿಮಂಡಲದ ಸದಸ್ಯರು ಯಾವ ಧಾಟಿಯಲ್ಲಿ ಮಾತನಾಡಿದರು ಎಂದರೆ, ನಮ್ಮ ಮಾತನ್ನು ಅವರು ಕೇಳುವುದು ಬೇಡ ಏಕೆಂದರೆ ನಮಗೆ ಜನ ತಿರಸ್ಕಾರ ಮಾಡಿ ೨೪ ಜನರನ್ನು ಆರಿಸಿ ಕಳುಹಿಸಿದ್ದಾರೆ, ೧೮೦ ಜನರನ್ನು ಏನು ತಿರಸ್ಕಾರ ಕಡೆ ಕಳುಹಿಸಿದ್ದಾರೆ ಆ ಜನರ ಮಾತನ್ನು ಕೇಳುವುದಕ್ಕೆ ಅವರು ಹೇಳುತ್ತಾರೆ, ರೆಕಾರ್ಡ್ ಆಗುತ್ತಿದೆ ಎಂದು ಹೇಳುವ ಮಾತನ್ನು ಹೇಳುತ್ತಾರೆ. ಅವರ ಧೋರಣೆ ಏನು ಎಂದು ವಿಚಾರಣೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಅಧಿವೇಶನದಲ್ಲಿ ಎಷ್ಟು ಹೊತ್ತು ಈ ಸದನದಲ್ಲಿ ಕುಳಿತಿದ್ದರು ಎಂದು ತಾವು ಯೋಚನೆ ಮಾಡಬೇಕು. ಈ ಸದನದ ಸದಸ್ಯರು ಹೇಳತಕ್ಕ ವಿಚಾರಗಳ ಬಗ್ಗೆ ಅವರಿಗೆ ಯಾವ ರೀತಿಯಲ್ಲಿಯೂ ಗಮನ ಇಲ್ಲ. ಇದರ ಬಗ್ಗೆ ತಿರಸ್ಕಾರ ಇದೆಯೇ ಎನ್ನುವ ಭಾವನೆ ವಿರೋಧ ಪಕ್ಷದವರಿಗೆ ಬರುತ್ತದೆ. ಇದರಿಂದ ನಮಗೆ ನೋವು ಆಗುತ್ತದೆ. ತಾವು ಈ ಬಗ್ಗೆ ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಇವತ್ತು ಇಲ್ಲಿ ಪ್ರಮುಖವಾದ ಚರ್ಚೆ ಮುಂದುವರಿಯುತ್ತಿದೆ. ಸದನದ ಯಾವುದೇ ಕಾರ್ಯಕಲಾಪ ಪ್ರಾರಂಭ ಆಗುವಾಗ ಸಚಿವರು ಸಭೆಯಲ್ಲಿ ಇರಬೇಕಾಗುತ್ತದೆ, ಇವತ್ತು ಮಂತ್ರಿಮಂಡಲದ ಸಂಖ್ಯೆ ಕಡಿಮೆ ಇದೆ. ಇರುವ ಮಂತ್ರಿಗಳೂ ಇಲ್ಲಿಗೆ ಬಂದು ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಪುರುಸೊತ್ತು ಮಾಡಿಕೊಳ್ಳುವುದಿಲ್ಲ. ಬಂದು ಕೇಳಿದ್ದನ್ನು ಇಂಪ್ಲಿಮೆಂಟ್ ಮಾಡಲಿಪದಕ್ಕೆ ಅವರಿಗೆ ಸಮಯ ಇಲ್ಲ. ಇವತ್ತು ಒಬ್ಬೊಬ್ಬರು ೩-೪

ಪೋರ್ಟ್‌ಫೋಲಿಯೋ ನೋಡಿಕೊಳ್ಳುತ್ತಿದ್ದಾರೆ. ಇವತ್ತು ಕಾರ್ಯಕಲಾಪ ಪ್ರಾರಂಭವಾಗುವಾಗ ಒಬ್ಬ ಹಿರಿಯ ಸಚಿವರೂ ಇಲ್ಲದೇ ಇರುವ ಸಂದರ್ಭ. ಮತ್ತೆ, ಈಗ ಒಬ್ಬರೇ ಹಿರಿಯ ಸಚಿವರು ಇರುವುದಕ್ಕೆ ನಮಗೆ ಸಮಾಧಾನ ಇಲ್ಲ. ನಾವೆಲ್ಲಾ ಈಗ ಹೊರಗಡೆ ಹೋಗುತ್ತೇವೆ. ಅವರು ಪುರಸೊತ್ತು ಮಾಡಿಕೊಂಡು ಮಂತ್ರಿಗಳು ಬಂದು ಕುಳಿತು ಕೊಂಡ ಮೇಲೆ ನಾವು ಕಾರ್ಯಕಲಾಪವನ್ನು ನಡೆಸೋಣ.

ಅಧ್ಯಕ್ಷರು.— ನಾನು ಹೇಳುವುದನ್ನು ಸ್ವಲ್ಪ ಕೇಳಿ.

ಶ್ರೀ ವಾಟಾಳ್ ನಾಗರಾಜ್.— ಈ ಸಭೆಯ ನಡವಳಿಕೆಯನ್ನು ತಾವು ನೋಡುತ್ತಿದ್ದೀರಿ ಅಧ್ಯಕ್ಷರೇ ಆದರೆ...

ಅಧ್ಯಕ್ಷರು.— ನಾನು ಸಭೆಯ ನಡವಳಿಕೆಯನ್ನು ನೋಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.— ಈಗ ಏನಾಗಿದೆ ಎಂದರೆ...

ಅಧ್ಯಕ್ಷರು — ದಯವಿಟ್ಟು ತಾವು ತಮ್ಮ ಸ್ಥಾನವನ್ನು ಗೌರವಿಸುತ್ತೀರಾ? ೯ ಗಂಟೆಗೆ ನಾವು ಇಲ್ಲಿ ಸೇರಬೇಕಾಗಿತ್ತು. ೯ ಗಂಟೆಗೆ ನಾನು ಬೆಲ್ ಹಾಕಿಸಿದೆ. ಬಹಳ ವಿಷಾದದ ಸಂಗತಿ ಏನೆಂದರೆ ಸಭೆಯಲ್ಲಿ ಕೋರಂ ಇನ್ನೂ ಆಗಿರಲಿಲ್ಲ.

ಶ್ರೀ ವಾಟಾಳ್‌ನಾಗರಾಜ್.— ನಾವೆ ಇದ್ದೆವು ಸ್ವಾಮಿ.

ಅಧ್ಯಕ್ಷರು — ಕೋರಂ ತುಂಬಿಸತಕ್ಕದ್ದು ಮಂತ್ರಿಗಳ ಜವಾಬ್ದಾರಿ ಎಂದು ನಾನು ತಿಳಿಯುವುದಿಲ್ಲ. ಈ ಸದನದ ಪ್ರತಿಯೊಬ್ಬ ಸದಸ್ಯನ ಮೇಲೂ ಕೂಡಾ ಕೋರಂ ತುಂಬಿಸುವ ಜವಾಬ್ದಾರಿ ಇದೆ ಎಂದು ನಾನು ಭಾವಿಸುತ್ತೇನೆ. ಅಂದ ಮಾತ್ರಕ್ಕೆ ಮಂತ್ರಿಮಂಡಲದ ಸದಸ್ಯರ್ಯಾರೂ ಸಭೆ ಪ್ರಾರಂಭ ಆದಾಗ ಇರಲಿಲ್ಲ ಎನ್ನುವುದು ನಾವು ತೀವ್ರತರವಾಗಿ ಗಮನಿಸತಕ್ಕ ವಿಚಾರವಾಗಿದೆ. ಈ ಸಭೆಯ ನಡವಳಿಕೆ ಬಗ್ಗೆ ಮಾನ್ಯ ಮಂತ್ರಿಗಳೇ ಹೆಚ್ಚು ಮುತುವರ್ಜಿಯಿಂದ ಮತ್ತು ಹೆಚ್ಚು ಕಳಕಳಿಯಿಂದ, ಹೆಚ್ಚು ಕಾಳಜಿಯಿಂದ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸತಕ್ಕದ್ದು ಅವರ ಮೇಲೆ ಬಿದ್ದಿರತಕ್ಕ ಜವಾಬ್ದಾರಿ. ಆ ಜವಾಬ್ದಾರಿಯನ್ನು ಅವರು ನಿರ್ವಹಿಸಬೇಕೆಂದು ಹೇಳಿ ಅವರಿಗೆ ಸೂಚಿಸುತ್ತೇನೆ. And I would like to go down on records as it is a serious lapse on the part of the ministers.

ಶ್ರೀ ಟಿ ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ, ನಿಜಕ್ಕೂ ಕೂಡಾ ಸಂಸದೀಯ ವ್ಯವಹಾರದಲ್ಲಿ ಆಳುವ ಮತ್ತು ಪ್ರತಿ ಪಕ್ಷದ ಸದಸ್ಯರು...

ಒಬ್ಬ ಮಾನ್ಯ ಸದಸ್ಯರು.— ಆಯಿತು ಬಿಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— I have to tell you on behalf of the Government.

MR. SPEKER.— He is offering an explanation on behalf of the Government.

ಶ್ರೀ ವಾಟಾಳ್‌ನಾಗರಾಜ್.— ಆಪರೇ ಇಲ್ಲಿ ಇರುವುದಿಲ್ಲ ಸ್ವಾಮಿ. ಮಾನ್ಯ ನರಸಿಂಹ ಮೂರ್ತಿಯವರು ಇಲ್ಲಿ ಭಾಷಣ ಮಾಡುವುದಕ್ಕೆ ಮಾತ್ರ ಬರುತ್ತಾರೆ. ಬೇರೆ ಸಮಯದಲ್ಲಿ ಅವರು ಸಭೆಗೇ ಒರುವುದಿಲ್ಲ. ಅವರು ಎಷ್ಟು ಸಾರಿ ಬಂದಿದ್ದಾರೆಂದು ಕೇಳಿ ಸ್ವಾಮಿ.

ಅಧ್ಯಕ್ಷರು.— ಮಾನ್ಯ ಸದಸ್ಯರು ಕೊಂಚ ಪರಿಶೀಲಿಸಿ ನೋಡಬೇಕು. ಮಾನ್ಯ ಸಚಿವರು ಮೇಲ್ಮನೆಯ ಸಭಾ ನಾಯಕರಾಗಿದ್ದಾರೆ. ಈಗ ಆ ಸಭೆಯಂ ಕಾರ್ಯಕಲಾಪಗಳೂ ಸಹ ನಡೆಯುತ್ತಿವೆ.

ಶ್ರೀ ವಾಟಾಳ್ ನಾಗರಾಜ್.— ಆ ಸಭೆಯ ಹಾಜರಾತಿ ತರಿಸಿ ಸ್ವಾಮಿ, ಮಂತ್ರಿಗಳೆಲ್ಲಾ ಅಲ್ಲೇ ಹೋಗಿ ಕುಳಿತಿರುತ್ತಾರೆ. ಪ್ರತಿದಿನದ ಹಾಜರಾತಿ ತರಿಸಿ. ಅದೇನೋ ಒಂದು ಫ್ರೇಮು ವಿಶ್ವಾಸ ಇಟ್ಟುಕೊಂಡಿದ್ದಾರೆ ಆ ಸಭೆಗೆ. ಇಲ್ಲಿಗೆ ಅವರು ಬರುತ್ತಾ ಇಲ್ಲ. ಇದರಿಂದ ನಮಗೆ ನೋವು ಆಗಿದೆ.

ಅಧ್ಯಕ್ಷರು.— ಮತ್ತೆ ಮತ್ತೆ ಹೇಳಿದರೆ ಹೇಗೆ ? ನೀವೂ ಹೇಳಿದ್ದೀರಿ, ನಾನೂ ಹೇಳಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಭಾಷಣ ಮಾಡುವುದಕ್ಕೆ ರಿಲ್ಲ. ಸರ್ಕಾರದ ಪರವಿಯಿಂದ ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ. ಸಂಸದೀಯ ವ್ಯವಸ್ಥೆ

ಯಲ್ಲಿ ಆಳುವ ಪಕ್ಷ ಹಾಗೂ ವಿರೋಧ ಪಕ್ಷಗಳು ತಾವು ಅಪ್ಪಣೆ ಕೊಡಿಸಿದ ಹಾಗೆ ಸಭೆಯಲ್ಲಿ ಪಾಲಿಸಿದ್ದೇವೆ. ಸಕಾಲದಲ್ಲಿ ಕಾರ್ಯಕ್ರಮಗಳನ್ನು ನಿರ್ವಹಿಸುವುದರ ಬಗ್ಗೆ ಒಪ್ಪಿಗೆ ಇದೆ. ಇವತ್ತು ವಾಟಾಳ್ ನಾಗರಾಜ್ ಅವರು ನನ್ನ ಬಗ್ಗೆ ನೇರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾನು ನನ್ನ ಇಲಾಖೆಗಳಿಗೆ ಸಂಬಂಧ ಪಟ್ಟಹಾಗೆ ಯಾವುದೇ ಸಂದರ್ಭದಲ್ಲಿ ಚರ್ಚೆಯಾದಾಗ ನಾನು ಖುದ್ದಾಗಿ ಬಂದು ಉತ್ತರ ಹೇಳಿದ್ದೇನೆ, ಕಾರ್ಯಕಲಾಪದಲ್ಲಿ ಭಾಗವಹಿಸಿದ್ದೇನೆ. ಯಾವತ್ತೂ ನನಗೆ ಈ ಸಭೆಯ ಬಗ್ಗೆ ಹೆಚ್ಚಿನ ಗೌರವವಿದೆ. ಆದುದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರೋ ಅದನ್ನು ಸರ್ಕಾರ ಗಮನಿಸಿದೆ. ಸರ್ಕಾರ ಮತ್ತು ಎಲ್ಲರೂ ಕೂಡ ಸೇರಿ ಸದನದ ಗೌರವವನ್ನು ಅತ್ಯಂತ ಎಚ್ಚರಿಕೆಯಿಂದ ಸಂಪದಿಯ ವ್ಯವಸ್ಥೆಯಲ್ಲಿ ಎತ್ತಿಹಿಡಿಯಬೇಕು. ಈ ದಿಸೆಯಲ್ಲಿ ಮುಂದಾಗೋಣವೆಂದು ಹೇಳಿ,ಮಾನ್ಯ ಸಭಾಧ್ಯಕ್ಷರ ಸೂಚನೆಯನ್ನು ನಾನು ಸ್ವಾಗತ ಮಾಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು.— ನಿನ್ನೆ ಪ್ರಶ್ನೆಕಾಲದ ಸಮಯದಲ್ಲಿ ನಡೆದ ಅಹಿತಕರ ಘಟನೆಯಿಂದ ವಾರ್ಡ್ ನಂ.೩೦ ವಾರ್ಡ್ ಸಿಬ್ಬಂದಿಯಲ್ಲಿ ಒಬ್ಬರಿಗೆ ತೀವ್ರ ನೋವಾಗಿದೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಬೇಕು ಅವರು ದೈಹಿಕವಾಗಿ ಮಾನಸಿಕವಾಗಿ ಮನಃಕ್ಲೇಶಗೊಂಡಿದ್ದಾರೆ. ಪಾಪರ ಸಿಬ್ಬಂದಿ ಸಲ್ಲಿಸತಕ್ಕ ಉತ್ತಮ ಕಾರ್ಯನಿರ್ವಹಣೆಯನ್ನು ನಾನು ಶ್ಲಾಘನ ಮಾಡಿ, ನಿನ್ನೆ ಘಾಸಿಗೊಳಿಸಿದ ಪ್ರಕರಣದಲ್ಲಿ ಗಾಯಗೊಂಡಿದ್ದಾರೆ ಅವರಿಗೆ ೧ ಸಾವಿರ ರೂಪಾಯಿಗಳನ್ನು ನೀಡಲು ವಿನಂತಿಸಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಾನು ಸದಸ್ಯರ ಪರವಾಗಿ ೧೦೦ ರೂಪಾಯಿಗಳನ್ನು ಕೊಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಧನ್ಯವಾದ ಸಲ್ಲಿಸತಕ್ಕ ನಿರ್ಣಯದ ಮೇಲಿನ ಚರ್ಚೆ

†ಶ್ರೀ ಎ. ಟಿ. ರಾಮಸ್ವಾಮಿ(ಅರಕಲಗೂಡು).— ಮಾನ್ಯ ಅಧ್ಯಕ್ಷರೆ, ವಿಧಾನಮಂಡಲದಲ್ಲಿ ಸಭೆಯ ಸದಸ್ಯರಿಗೆ ಸದಸ್ಯರುಗಳನ್ನು ಉದ್ದೇಶಿಸಿ ಮಾನ್ಯರಾಜ್ಯಪಾಲರು ಕಳೆದ ತಿಂಗಳು ೧೫ನೇ ತಾರೀಖು ಮಾಡಿದ ಭಾಷಣಕ್ಕೆ ನಾನು ವಂದನೆಯನ್ನು ಸಲ್ಲಿಸ ತಕ್ಕ ನಿರ್ಣಯವನ್ನು ಮಂಡಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ರಾಜ್ಯದ ಕಡುಬಡವರಿಗೆ, ಈ ರಾಜ್ಯದ ರೈತಾಪಿ ವರ್ಗದ ಜನರಿಗೆ ಮತ್ತು ಅದಕ್ಕಿಂತ ಹೆಚ್ಚಾಗಿ ಭ್ರಷ್ಟಾಚಾರವನ್ನು ಹತ್ತಿಕ್ಕಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎನ್ನುವುದನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ರಾಜ್ಯಪಾಲರ ಭಾಷಣವು ಹಿನೇ ಪ್ಯಾರಾದಲ್ಲಿ "ನನ್ನ ಸರ್ಕಾರ ರಾಜ್ಯದ ರೈತರ ಹಿತಾಸಕ್ತಿಗಳನ್ನು ಸದಾ ಗಮನದಲ್ಲಿಟ್ಟುಕೊಂಡು ಅವರಿಗೆ ಸಾಧ್ಯವಾದ ಎಲ್ಲಾ ನೆರವನ್ನು ಒದಗಿಸುತ್ತದೆಂದು'' ಹೇಳಿದ್ದಾರೆ. ಈ ಸದನ ಪ್ರಾರಂಭವಾದಾಗಿನಿಂದ ನಾನು ಹೊಸ ಸದಸ್ಯನಾಗಿ ಇಲ್ಲಿ ಕುಳಿತುಕೊಂಡು ನೋಡಿದ್ದೇನೆ, ರೈತರ ಬಗ್ಗೆ ಮಾತು ಬಂದಾಗ, ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ವಿರೋಧಪಕ್ಷಗಳ ಹಿರಿಯ ಸದಸ್ಯರುಗಳು ಬಹಳವಾಗಿ ಮಾತನಾಡಿದ್ದಾರೆ. ನನಗಾದರೂ ಅನಿಸುತ್ತದೆ, ರೈತರ ಸಾಲ ಮನ್ನಾ ಮಾಡುವ ಬಗ್ಗೆ ಪ್ರಸ್ತಾಪ ಮಾಡುವುದಕ್ಕಿಂತ ಪ್ರಮುಖವಾಗಿರತಕ್ಕ ವಿಚಾರ ರೈತರ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ರೈತರಿಂದ ಭ್ರಷ್ಟಾಚಾರ ಮುಖಾಂತರ ಹಣವನ್ನು ಕೆಗೆದುಕೊಳ್ಳುತ್ತಿದ್ದಾರೆ ಅದನ್ನು ಮೊದಲು ನಿಲ್ಲಿಸಬೇಕು. ಇದು ನಿಜವಾಗಿಯೂ ರೈತರ ಸಾಲ ಮನ್ನಾ ಮಾಡುವುದಕ್ಕಿಂತ ಬಹಳ ಮುಖ್ಯವಾದ ವಿಚಾರ ಆ ದಿಕ್ಕಿನಲ್ಲಿ ನಮ್ಮ ಸರ್ಕಾರ ಗಮನಹರಿಸಿದೆ. ಭ್ರಷ್ಟಾಚಾರವನ್ನು ಹತ್ತಿಕ್ಕಲಿಕ್ಕೆ ಮೂರು ಅಂಶಗಳನ್ನು ಜಾರಿಗೆ ತರಲಾಗುವುದೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಭ್ರಷ್ಟಾಚಾರವನ್ನು ತಪ್ಪಿಸಿ ಈ ಸಮಾಜದಲ್ಲಿ ಕಡು ಬಡವರಿಗೆ ಏನು ಅನ್ಯಾಯವಾಗುತ್ತಿದೆ ಏನು ಶೋಷಣೆಯಾಗುತ್ತಿದೆ ಅದು ನಿಲ್ಲಬೇಕು. ಆ ದಿಕ್ಕಿನಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿರುವುದು ಬಹಳ ಸಂತೋಷದ ವಿಚಾರವೆಂದು ಈ ಸದನದ ಸದಸ್ಯರ ಗಮನಕ್ಕೆ ತರಲಿಕ್ಕೆ ನಾನ್ನು ಇಚ್ಛೆಪಡುತ್ತೇನೆ ಭ್ರಷ್ಟಾಚಾರ ಬಹು ಭೂತಾಕಾರದ ಪ್ರಶ್ನೆ ಈ ಸಮಸ್ಯೆಯನ್ನು ಎತ್ತಿಕೊಂಡು ವಿರೋಧಪಕ್ಷದ ನಾಯಕರು, ವಿರೋಧಪಕ್ಷದ ಇತರೆ ಹಿರಿಯ ನಾಯಕರುಗಳು ಹಾಗೂ ಸ್ನೇಹಿತರು ಮಾತನಾಡಿರತಕ್ಕದ್ದು ನಿಜವಾಗಿಯೂ ದುರ್ದೈವ. ಸಾಲ ಮನ್ನಾ ಮಾಡುವುದು ಬಹಳ ದೊಡ್ಡ ಸಮಸ್ಯೆಯಲ್ಲ

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.